## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 820/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಜಶೀಲ |
| ಗಂಡನ  ಹೆಸರು | : | ಮುನೀರ್ ಪಾಷಾ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಆಪ್ತ ಸಮಾಲೋಚಕಿ, ಮಹಿಳಾ ಸಾಂತ್ವನ ಕೇಂದ್ರ, ಹೆಚ್.ಡಿ. ಕೋಟೆ. |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 28.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ**

ನಾನು ಕಳೆದ 10 ವರ್ಷಗಳಿಂದ ಮಹಿಳಾ ಸಾಂತ್ವನ ಕೇಂದ್ರ, ಹೆಚ್.ಡಿ. ಕೋಟೆ ಇಲ್ಲಿ ಆಪ್ತ ಸಮಾಲೋಚಕಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 31.05.2020 ರಂದು ಮಧ್ಯಾಹ್ನ ಸುಮಾರು 03.00 ಗಂಟೆ ಸಮಯದಲ್ಲಿ ನಾನು ನಮ್ಮ ಕಛೇರಿಯಲ್ಲಿ ಇರುವಾಗ ಅಪ್ರಾಪ್ತ ಬಾಲಕಿಯಾದ ಚಾಸಾ-2 ರವರು ನನಗೆ ಕರೆ ಮಾಡಿ ಆರೋಪಿಗಳು ತನ್ನನ್ನು ದಿನಾಂಕಃ 16.04.2020 ರಂದು 2 ನೇ ಆರೋಪಿಗೆ ಕೊಟ್ಟು ಬಾಲ್ಯ ವಿವಾಹ ಮಾಡಿಸಿ ದಿನಾಂಕಃ 01.06.2020 ರಂದು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಲು ಬರುತ್ತಿದ್ದಾರೆ ಆದರೆ ನನಗೆ ಹೋಗಲು ಇಷ್ಟ ಇರುವುದಿಲ್ಲ ಹಾಗು ತನಗೆ ರಕ್ಷಣೆ ನೀಡಬೇಕೆಂದು ಕೇಳಿಕೊಂಡಿರುತ್ತಾಳೆ. ಸದರಿ ವಿಚಾರವನ್ನು ನಾನು ಚಾಸಾ-1 ರವರಿಗೆ ತಿಳಿಸಿರುತ್ತೇನೆ.  ನಂತರ ಸದರಿ ಮಾಹಿತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಾನು, ಚಾಸಾ-1, ಚಾಸಾ-7 ಮತ್ತು ಚಾಸಾ-8 ರವರು ಚಾಸಾ-2 ರವರ ಮನೆಗೆ ಹೋಗಿ ಆಕೆಯನ್ನು ವಿಚಾರಿಸಿದ್ದು, ಆಕೆ ತನ್ನ

ತಾಯಿಯಾದ 1 ನೇ ಆರೋಪಿಯ ಸಮಕ್ಷಮದಲ್ಲಿ ನನಗೆ ಫೋನ್ ನಲ್ಲಿ ತಿಳಿಸಿದ ವಿಚಾರವನ್ನೇ ತಿಳಿಸಿರುತ್ತಾಳೆ. ನಂತರ ನಾವು ಬಾಲಕಿಯನ್ನು ರಕ್ಷಿಸಿ ಬಾಲಕಿಯರ ಬಾಲಮಂದಿರಕ್ಕೆ ಬಿಟ್ಟಿರುತ್ತೇವೆ ಹಾಗು ಚಾಸಾ-1 ರವರು ಈ ಬಗ್ಗೆ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಮೇಲೆ ಪ್ರಕರಣ ದಾಖಲಾಗಿದ್ದು ಈ ಬಗ್ಗೆ ತನಿಖಾಧಿಕಾರಿಯರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಬಿ.ಎಸ್.ಯು. ವಕೀಲರಿಂದಃ**

ನನಗೆ ಬಂದ ಮಾಹಿತಿಯ ವಿಚಾರವನ್ನು ನಾನು ಚಾಸಾ-1 ರವರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ. ನಾವು ಸದರಿ ಮಾಹಿತಿಯನ್ನು ಖಚಿತಪಡಿಸಿಕೊಳ್ಳಲು ಬೆಳಿಗ್ಗೆ ಸುಮಾರು 11.00 ಗಂಟೆಗೆ ಚಾಸಾ-2 ರವರ ಮನೆಗೆ ಹೋಗಿರುತ್ತೇವೆ. ನಾವು ಚಾಸಾ-2 ರವರ ಮನೆಗೆ ಹೋದ ಸಮಯದಲ್ಲಿ ಅಲ್ಲಿ ಚಾಸಾ-1 ರವರ ತಾಯಿ ನೇತ್ರಾವತಿ ಹಾಗು ಅವರ ನೆಂಟರಿಷ್ಟರು ಇದ್ದಿದ್ದು ಸದರಿ ನೆಂಟರಿಷ್ಟರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾವು ಚಾಸಾ-2 ರವರ ಮನೆಗೆ ಹೋದಾಗ ಚಾಸಾ-2 ರವರು ನಮಗೆ ಮಾಹಿತಿ ನೀಡಿರುತ್ತಾರೆ. ನನ್ನ ಸಮಕ್ಷಮದಲ್ಲಿ ಚಾಸಾ-2 ರವರಿಗೆ ಸಂಬಂಧಿಸಿದಂತೆ ಚಾಸಾ-1 ರವರು ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ಚಾಸಾ-1 ರವರು ಚಾಸಾ-2 ರವರಿಗೆ ಸಂಬಂಧಿಸಿದ ಶಾಲಾ ದಾಖಲಾತಿ ಹಾಗು ಇತರೇ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ಚಾಸಾ-2 ರವರ ಮನೆಗೆ ಹೋದಾಗ ನಾವು ಚಾಸಾ-2 ರವರನ್ನು ವಿಚಾರಿಸಿರುತ್ತೇವೆ. ಚಾಸಾ-1 ರವರು ಅಲ್ಲಿ ಬೇರೆಯರನ್ನು ವಿಚಾರಿಸಿದ ಬಗ್ಗೆ ನಾನು ಗಮನಿಸಿರುವುದಿಲ್ಲ. ಸದರಿ ದಿನದಂದು ನನಗೆ ಚಾಸಾ-2 ರವರಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ ಹಾಗು ನಾವು ಚಾಸಾ-2 ರವರ ಮನೆಗೆ ಹೋಗಿ ಅಲ್ಲಿ ಆಕೆಯ ಹೇಳಿಕೆಯನ್ನು

ದಾಖಲಿಸಿಕೊಂಡಿರುವುದಿಲ್ಲ, ಬದಲಾಗಿ ಚಾಸಾ-1 ರವರು ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ರಿಂದ 4 ನೇ ಆರೋಪಿಗಳ ಪರ ಶ್ರೀ.ಎಂ.ಎಸ್.ಕೆ./ಶ್ರೀ.ವಿ.ಕೆ. ವಕೀಲರಿಂದಃ</u>**

ನಿಮಗೆ ಬಂದಿದೆ ಎಂದು ಹೇಳಲಾದ ಮಾಹಿತಿಯನ್ನು ಚಾಸಾ-1 ರವರಿಗೆ ಲಿಖಿತವಾಗಿ ವರದಿ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಲಿಖಿತವಾಗಿ ನೀಡುವ ಅವಶ್ಯಕತೆ ಇರುವುದಿಲ್ಲ, ಮೌಖಿಕವಾಗಿ ತಿಳಿಸಿದರೆ ಸಾಕು ಎಂದು ನುಡಿಯುತ್ತಾರೆ. ನಮ್ಮ ಕಛೇರಿಗೆ ಯಾವುದೇ ಮಾಹಿತಿ ಬಂದರೆ ಅದನ್ನು ನಮ್ಮ ಸಂಬಂಧಿತ ದಾಖಲೆಗಳಲ್ಲಿ ನಮೂದಿಸುತ್ತೇವೆ. ನನಗೆ ಚಾಸಾ-2 ರವರಿಂದ ಬಂದ ಮಾಹಿತಿಯನ್ನು ಫೋನ್ ಮೂಲಕ ಬಂದ ಮಾಹಿತಿ ಎಂದು ರಿಜಿಸ್ಟರ್ ನಲ್ಲಿ ನಮೂದು ಮಾಡಿರುತ್ತೇನೆ. ಆ ಬಗ್ಗೆ ತನಿಖಾಧಿಕಾರಿಯವರು ನನ್ನನ್ನು ಹಾಜರುಪಡಿಸುವಂತೆ ಕೇಳದೇ ಇರುವುದರಿಂದ ನಾನು ಪೋಲೀಸರಿಗೆ ಸದರಿ ದಾಖಲೆಯನ್ನು ನೀಡಿರುವುದಿಲ್ಲ. ಸದರಿ ಮಾಹಿತಿ ಬಂದ ದಿನ ಸದರಿ ಮಾಹಿತಿಯನ್ನು ನಾನು ಚಾಸಾ-1 ರವರಿಗೆ ತಿಳಿಸಿದ್ದು ಅವರು ಮರು ದಿನ ಅಂದರೆ ದಿನಾಂಕಃ 01.06.2020 ರಂದು ಚಾಸಾ-2 ರವರ ಮನೆಗೆ ಹೋಗಿ ವಿಚಾರಿಸೋಣ ಎಂದು ಹೇಳಿದ ಮೇರೆಗೆ ನಾವು ಮಾಹಿತಿ ಬಂದ ಮರುದಿನ ಅಂದರೆ ದಿನಾಂಕಃ 01.06.2020 ರಂದು ಚಾಸಾ-2 ರವರ ಮನೆಗೆ ಹೋಗಿ ಆಕೆಯನ್ನು ವಿಚಾರಿಸಿರುತ್ತೇವೆ. ಚಾಸಾ-1 ರವರು ಚಾಸಾ-2 ರವರ ಮನೆಗೆ ವಿಚಾರಣೆ / ಸಮಾಲೋಚನೆ ಮಾಡಲು ಹೋಗುವ ಸಲುವಾಗಿ ಬರುವಂತೆ ತಿಳಿಸಿ ನನಗೆ ಲಿಖಿತ ನೋಟೀಸನ್ನು ನೀಡಿರುವುದಿಲ್ಲ ಸಾಕ್ಷಿ ಮುಂದುವರಿದು ಮೌಖಿಕವಾಗಿ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಚಾಸಾ-2 ರವರ ಮನೆಗೆ ಹೋಗಿ ಆಕೆಯನ್ನು ವಿಚಾರಿಸುವ ಸಮಯದಲ್ಲಿ ಚಾಸಾ-1 ರವರು

ಫೋಟೋ ತೆಗೆಸಿರುತ್ತಾರೆ. ಸದರಿ ಫೋಟೋದಲ್ಲಿ ನನ್ನ ಭಾವಚಿತ್ರ ಇದೆಯೋ ಇಲ್ಲವೋ ನನಗೆ ಈಗ ನೆನಪಿರುವುದಿಲ್ಲ. ನಾನು ಚಾಸಾ-2 ರವರ ಮನೆಗೆ ಹೋದ ಸಮಯದಲ್ಲಿ ಅಲ್ಲಿ ಚಪ್ಪರ ಹಾಕಿದ್ದಾರೋ ಇಲ್ಲವೋ ಎಂದು ನಾನು ಗಮನಿಸಿರುವುದಿಲ್ಲ. ಚಾಸಾ-2 ರವರು ನನ್ನ ಸಮಕ್ಷಮ ಅಥವಾ ಚಾಸಾ-1 ರವರ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ, ಬದಲಾಗಿ ನಮ್ಮ ಮೇಲಾಧಿಕಾರಿಯವರು ಚಿತಾವಣೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ-2 ರವರ ಮನೆಗೆ ಹೋಗಿದ್ದೆ ಎಂದು ಹೇಳಲಾದ ದಿನ ಅಲ್ಲಿ 2 ರಿಂದ 4 ನೇ ಆರೋಪಿತರು ಇದ್ದಿರಲಿಲ್ಲ. ಸದರಿ ದಿನದಂದು ನನಗೆ ಚಾಸಾ-2 ರವರಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ ಹಾಗು ನಾವು ಚಾಸಾ-2 ರವರ ಮನೆಗೆ ಹೋಗಿ ಅಲ್ಲಿ ಆಕೆಯ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ, ಬದಲಾಗಿ ಚಾಸಾ-1 ರವರು ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

(2 ರಿಂದ 4 ನೇ ಆರೋಪಿಗಳ ಪರ ವಕೀಲರು ಉಳಿದಂತೆ 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀ ಸವಾಲನ್ನೇ 2 ರಿಂದ 4 ನೇ ಆರೋಪಿಗಳ ಪರ ಅಳವಡಿಸಿಕೊಳ್ಳುವಂತೆ ಕೋರಿದ್ದು ಅವರ ಕೋರಿಕೆಯನ್ನು ಪರಿಗಣಿಸಿ 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು 2 ರಿಂದ 4 ನೇ ಆರೋಪಿಗಳ ಪರವೂ ಸಹ ಅಳವಡಿಸಿಕೊಳ್ಳಲಾಯಿತು.)

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**